**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ-22 ಪಿ.ಡಬ್ಲ್ಯೂ-17

| | | |
|---|---|---|
| ಹೆಸರು | ಃ | ರಾಹುಲ |
| ತಂದೆಃಗಂಡ | ಃ | ದಾಮು |
| ವಯಸ್ಸು | ಃ | 22 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕುಡಮುಡ |

ದಿನಾಂಕಃ29.01.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-5, 20, ರವರ ಪರಿಚಯ ಇರುತ್ತದೆ. ಉಳಿದವರ ಪರಿಚಯ ಇರುವುದಿಲ್ಲ. ಚಾಸಾ-21 ನನ್ನ ತಾಯಿ. ಮೃತ ದಾಮು ನನ್ನ ತಂದೆ. ಮೃತ ರತ್ನಾಬಾಯಿ ನನಗೆ ಗೊತ್ತಿಲ್ಲ. ನಾನು ಮನೆಯಲ್ಲಿದ್ದಾಗ ಒಂದು ಕರೆ ಬಂತು. ನನ್ನ ತಂದೆ ಮಹಾಗಾಂವ ಹೋದಾಗ ಅಪಘಾತ ಆಗಿದೆ ಎಂದು ತಿಳಿಸಿದರು ನಾನು ಆಸ್ಪತ್ರೆಗೆ ಹೋಗಿ ನೋಡುವವರೆಗೆ ನನ್ನ ತಂದೆ ದಾಖಲಾಗಿದ್ದರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.10.02.2020 ರಂದು ಸದರಿ ಘಟನೆ ನಡೆಯಿತು ಎಂದರೆ ಸರಿ. ಆರೋಪಿಯ ಟಂಟಂ ಸಂಖ್ಯೆ ಕೆಎ-32/ಬಿ-1889 ರಲ್ಲ ಚಾಸಾ-8 ರಿಂದ 15 ರವರೊಂದಿಗೆ ಮೃತ ರತ್ನಾಬಾಯಿ, ದಾಮು ಹಾಗೂ ಅದಿತ್ಯರವರು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಹಾಗಾಂವ ಕ್ರಾಸದಿಂದ ಅಂಬಲಗಾ ಕಡೆ ಹೋಗುವಾಗ ಆರೋಪಿ ವಾಹನವನ್ನು ಅತಿ ವೇಗವಾಗಿ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಪಲ್ಟಿ ಹೊಡೆಸಿರುತ್ತಾನೆ ಎಂದರೆ ಸರಿ. ಆಗ ರತ್ನಾಬಾಯಿ ಹಾಗೂ ದಾಮುರವರು ತೀರಿಕೊಂಡಿರುತ್ತಾರೆ ಎಂದರ ಸರಿ. ಚಾಸಾ-8 ರಿಂದ 15 ಹಾಗೂ ಆದಿತ್ಯರವರಿಗೂ ಗಾಯಗಳು ಆಗಿರುತ್ತವೆ ಎಂದರೆ ಸರಿ. ನಾನು ಪೋಲಿಸರ ಎದುರು ಈ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ನಾನು ಪ್ರಕರಣದ ಬಗ್ಗೆ ಮೊದಲ ಬಾರಿಗೆ ಈ ಪ್ರಕರಣದ ಬಗ್ಗೆ ಸಾಕ್ಷಿ ನೀಡುತ್ತಿದ್ದೇನೆ ಎಂದರ ಸರಿ. ನಾನು ಘಟನಾ ಸ್ಥಳದಲ್ಲಿ ಇರದೇ ಇದ್ದ ಕಾರಣ ಸ್ಥಳದಲ್ಲಿ ಏನಾಗಿದೆ ಹಾಗೂ ವಾಹನವನಲು ಯಾರು ಹೇಗೆ ಚಲಾಯಿಸುತ್ತಿದ್ದರು

ಎಂದು ಹೇಳಲು ಆಗುವುದಿಲ್ಲ ಎಂದರ ಸರಿ. ನನಗೆ ಯಾರು ಎಷ್ಟು ಗಂಟೆಗೆ ಮಾಹಿತಿ ನೀಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ನನಗೆ ಮಹಾಗಾಂವ ರಸ್ತೆ ಗೊತ್ತು ಎಂದರೆ ಸರಿ. ಘಟನೆ ಆದಾಗ ಮಹಾಗಾಂವ ರಸ್ತೆ ಸರಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಘಟನಾ ಸ್ಥಳದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಅಪಘಾತದ ಯಾವಾಗ ಎಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮೃತ ದಾಮುರವರು ನನ್ನ ತಂದೆ ಆದ ಕಾರಣ ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಆರೋಪಿಗೂ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ, ನನ್ನ ತಂದೆಯವರಿಗೆ ಪರಿಹಾರ ಧನ ಬರಬೇಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ